CALL 1930
NEW CYBER CRIME HELPLINE NUMBER

ನಮ್ಮ 112 Namma

# ಉತ್ತರ ಕನ್ನಡ ಜಿಲ್ಲಾ ಪೊಲೀಸ್
# ಶಿರಸಿ ಉಪ-ವಿಭಾಗ, ಶಿರಸಿ

## ಶಿರಸಿ ಶ್ರೀ ಮಾರಿಕಾಂಬಾ ದೇವಿ ಜಾತ್ರಾ-2026ರ ಅಂಗವಾಗಿ ಸಾರ್ವಜನಿಕರು ಅನುಸರಿಸಬೇಕಾದ ಮುಂಜಾಗ್ರತಾ ನಿಯಮಗಳು - ಸಲಹೆ - ಸೂಚನೆಗಳು

1. ಜಾತ್ರಾ ಸಮಯದಲ್ಲಿ ಹೆಚ್ಚಿನ ಜನಸಂದಣಿ ಇರುವುದರಿಂದ ಮಹಿಳೆಯರು ತಾವು ಧರಿಸಿರುವ ಬೆಲೆ ಬಾಳುವ ಆಭರಣಗಳ ಬಗ್ಗೆ ಜಾಗ್ರತೆ ವಹಿಸುವುದು. ಅನಾವಶ್ಯಕವಾಗಿ ಮೈಮೇಲೆ ಆಭರಣಗಳನ್ನು ಪ್ರದರ್ಶಿಸಬೇಡಿ. ಸರಗಳ್ಳರ ಬಗ್ಗೆ ಎಚ್ಚರವಿರಲಿ.
2. ಜಾತ್ರೆ, ಮಾರುಕಟ್ಟೆ, ದೇವಿಯ ಗದ್ದುಗೆ, ಇತರೆ ಜನಸಂಖ್ಯೆ ದಟ್ಟವಾಗಿರುವ ಪ್ರದೇಶಗಳಲ್ಲಿ ನಿಮ್ಮ ಮಕ್ಕಳ ಬಗ್ಗೆ ಜಾಗ್ರತೆ ವಹಿಸಿ.
3. ಸಾರ್ವಜನಿಕರು ಜಾತ್ರಾ ಪೇಟೆ, ದೇವಿಯ ದರ್ಶನಕ್ಕೆ ಬಂದಾಗ ನಿಮ್ಮ ಮೊಬೈಲ್, ಪರ್ಸ್, ವ್ಯಾನಿಟಿ ಬ್ಯಾಗ್‌ಗಳನ್ನು ಜೋಪಾನವಾಗಿಟ್ಟುಕೊಳ್ಳಿ.
4. ಸ್ಥಳಿಯ ಸಾರ್ವಜನಿಕರು ಜಾತ್ರಾ ಪೇಟೆಗೆ ಅನಗತ್ಯವಾಗಿ ವಾಹನಗಳನ್ನು ತೆಗೆದುಕೊಂಡು ಬರಬೇಡಿ. ಸಾಧ್ಯವಾದಷ್ಟು ಕಾಲ್ನಡಿಗೆಯಲ್ಲಿ ಬನ್ನಿ. ವಾಹನ ದಟ್ಟಣೆ ನಿಯಂತ್ರಿಸಲು ಅನುಕೂಲವಾಗಲಿದೆ.
5. ಜಾತ್ರಾ ಗದ್ದುಗೆಯ ಹತ್ತಿರ ಜನದಟ್ಟಣೆ ಇರುವುದರಿಂದ ಸರತಿ ಸಾಲಿನಲ್ಲಿಯೇ ಬಂದು ಶ್ರೀ ಮಾರಿಕಾಂಬಾದೇವಿಯ ದರ್ಶನ ಪಡೆಯಿರಿ. ನೂಕು ನುಗ್ಗಲು, ಗಲಾಟೆ, ಜಗಳ, ವಾದ-ವಿವಾದ ಮಾಡುವುದು ಬೇಡ.
6. ಸಾರ್ವಜನಿಕ ಶಾಂತಿ-ಸುವ್ಯವಸ್ಥೆ ಹಿತದೃಷ್ಟಿಯಿಂದ ಪೊಲೀಸರು ನೀಡುವ ಸಲಹೆ-ಸೂಚನೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿಕೊಂಡು ಪಾಲಿಸಿ.
7. ಜಾತ್ರಾ ಪೇಟೆಯಲ್ಲಿ ಮಹಿಳೆಯರ ಸುರಕ್ಷತೆಯ ಕುರಿತು ನಿಗಾ ವಹಿಸಿ. ಪುಂಡ-ಪೋಕರಿಗಳು ಮಹಿಳೆಯರೊಂದಿಗೆ ಅನುಚಿತವಾಗಿ ಅಥವಾ ಅಸಭ್ಯವಾಗಿ ವರ್ತಿಸಿದಲ್ಲಿ ಕೂಡಲೇ ಪೊಲೀಸ್ ಸಹಾಯವಾಣಿಗೆ ಮಾಹಿತಿ ನೀಡಿ.
8. ಜಾತ್ರಾ ಪೇಟೆಯಲ್ಲಿ ವಿಕಲಾಂಗರು ಹಾಗೂ ಹಿರಿಯ ನಾಗರಿಕರ ಸುರಕ್ಷತೆಯ ಕುರಿತು ಎಚ್ಚರವಹಿಸಿ. ಗದ್ದುಗೆಯ ಹತ್ತಿರ ವಿಕಲಾಂಗರು ಮತ್ತು ಹಿರಿಯ ನಾಗರಿಕರಿಗೆ ದೇವಿಯ ದರ್ಶನಕ್ಕೆ ವಿಶೇಷ ವ್ಯವಸ್ಥೆ ಮಾಡಲಾಗಿದ್ದು, ಸಹಾಯ ಪಡೆದುಕೊಳ್ಳಿ.
9. ರಾತ್ರಿ ವೇಳೆ ನಿರ್ಜನ ಪ್ರದೇಶಗಳಲ್ಲಿ ಮಹಿಳೆಯರು ಒಂಟಿಯಾಗಿ ತಿರುಗಾಡಬೇಡಿ.
10. ಜಾತ್ರಾ ಪೇಟೆಗೆ ಹೊರಗಿನಿಂದ ಬಂದ ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಉಂಟಾದಲ್ಲಿ ಕೂಡಲೇ **sirsi police.gov.in** ಪೊಲೀಸ್ ವೆಬ್‌ಸೈಟ್ ಮತ್ತು ಸಹಾಯವಾಣಿ-112 ಗೆ ಸಂಪರ್ಕಿಸಿ ಮಾಹಿತಿ ನೀಡಿ, ಸಹಾಯ ಪಡೆದುಕೊಳ್ಳಿ.
11. ಶ್ರೀ ಮಾರಿಕಾಂಬಾ ದೇವಿಯ ಜಾತ್ರೆಯ ಸಂಪೂರ್ಣ ಮಾಹಿತಿಗಾಗಿ **sirsi police.gov.in** ವೆಬ್ ಸೈಟ್‌ಗೆ ಭೇಟಿ ನೀಡಿ ಹಾಗೂ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಮಾಹಿತಿಯನ್ನು ಪಡೆದುಕೊಳ್ಳಬಹುದು.
12. ಹಿರಿಯ ನಾಗರಿಕರು ಮತ್ತು ವಯೋವೃದ್ಧರ ಸುರಕ್ಷತೆ ಬಗ್ಗೆ ಜಾಗ್ರತೆ ವಹಿಸಿ.

13. ಸಾರ್ವಜನಿಕರು ಜಾತ್ರಾ ಪೇಟೆಗೆ ಮಕ್ಕಳನ್ನು ಕರೆದುಕೊಂಡು ಬಂದಾಗ ಮಕ್ಕಳ ಸುರಕ್ಷತೆಯ ಕುರಿತು ನಿಗಾ ವಹಿಸಿ.
14. ಮಕ್ಕಳು ಕಾಣೆಯಾದಲ್ಲಿ ಅಥವಾ ತಪ್ಪಿಸಿಕೊಂಡಲ್ಲಿ ಭಯ ಪಡಬೇಡಿ ಕೂಡಲೇ **sirsipolice.gov.in** ಪೊಲೀಸ್ ವೆಬ್ ಸೈಟ್ ಹಾಗೂ ಸಹಾಯವಾಣಿ ಸಂಪರ್ಕಿಸಿ ಮಾಹಿತಿ ನೀಡಿ.
15. ಜ್ಯುವೆಲ್ಲರಿ ಅಂಗಡಿ / ವ್ಯಾಪಾರ ಮಳಿಗೆಗಳಿಗೆ ರೋಲಿಂಗ್ ಸೆಟ್ಟರ್‌ಗೆ ಸೆಂಟರ್ ಲಾಕ್ / ಸಿಸಿ ಟಿವಿ ಅಳವಡಿಸಿಕೊಳ್ಳುವುದು.
16. ಅಪರಿಚಿತರು ಮತ್ತು ಸಂಶಯಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಪೊಲೀಸ್ ಠಾಣೆ / ಜಾತ್ರಾ ಹೊರ ಠಾಣೆ /ಸಹಾಯವಾಣಿ /ಕಂಟ್ರೋಲ್ ರೂಂ ಗೆ ತಿಳಿಸುವುದು.
17. ಸಾಧ್ಯವಾದಷ್ಟು ಮಟ್ಟಿಗೆ ಭಾರಿ ಆಭರಣ ಮತ್ತು ನಗದು ಹಣ ಮನೆಯಲ್ಲಿ ಇಡದೇ ಬ್ಯಾಂಕ್ ಲಾಕರಗಳಲ್ಲಿ ಸುರಕ್ಷಿತವಾಗಿಡುವ ವ್ಯವಸ್ಥೆ ಮಾಡಿಕೊಳ್ಳುವುದು.
18. ಮನೆಗೆ ಬೀಗ ಹಾಕಿಕೊಂಡು ಹೋಗುವುದು ಅನಿವಾರ್ಯವಾದಲ್ಲಿ ಸಂಬಂಧಿಸಿದ ಪೊಲೀಸ್ ಠಾಣೆಗೆ ಅಥವಾ ಸಂಬಂಧಿಸಿದ ಬೀಟ್ ಸಿಬ್ಬಂದಿಗಳಿಗೆ ಮಾಹಿತಿ ನೀಡುವದು.
19. ಮನೆಯ ಸುತ್ತಮುತ್ತ, ರಾತ್ರಿ ಹೊತ್ತು ಬೆಳಕಿನ ವ್ಯವಸ್ಥೆ ಇಟ್ಟುಕೊಳ್ಳಿರಿ, ಸಂಶಯಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಪೊಲೀಸ್ ಠಾಣೆಗೆ ಅಥವಾ ಸಂಬಂಧಿಸಿದ ಬೀಟ್ ಸಿಬ್ಬಂದಿಗಳಿಗೆ ಮಾಹಿತಿ ನೀಡುವುದು.
20. ನಿಮ್ಮ ಮನೆಯ ಸುಭದ್ರತೆಗಾಗಿ ಸಿ.ಸಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಿ.
21. ದ್ವಿ ಚಕ್ರ ವಾಹನಗಳ ಕಳ್ಳತನ ತಡೆಯಲು ವಾಹನಗಳನ್ನು ನಿಲ್ಲಿಸಿ ಹೋಗುವಾಗ ಹ್ಯಾಂಡ್ ಲಾಕ್ / ಚೈನ ಲಾಕ್ ಬಳಸುವುದು.
22. ಸಾರ್ವಜನಿಕ ವಾಹನಗಳಿಗೆ ನಿಗದಿಪಡಿಸಲಾದ ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳನ್ನು ನಿಲ್ಲಿಸುವುದು ಹಾಗೂ ಪಾರ್ಕಿಂಗ್ ನಿಷೇಧಿತ ಸ್ಥಳದಲ್ಲಿ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುವುದು ಕಂಡು ಬಂದರೆ ಟೋಯಿಂಗ್ ಮಾಡಲಾಗುವುದು.
23. ವಾಹನ ಚಲಾಯಿಸುವಾಗ ತಪ್ಪದೇ ಹೆಲ್ಮೆಟ್/ಸೀಟ್ ಬೇಲ್ಟ್ ಧರಿಸಿ ಹೆದ್ದಾರಿಯಲ್ಲಿ ಶಿಸ್ತು ಪಥವನ್ನು ತಪ್ಪದೇ ಪಾಲಿಸಿ.
    ಸಾರ್ವಜನಿಕರು ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲ್ಲಿಸಬೇಡಿ, ನಿಗದಿಪಡಿಸಿದ ಸ್ಥಳಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಿ.
24. ಜಾತ್ರಾ ಪೇಟೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವುದು, ಕಸ / ತ್ಯಾಜ್ಯ ವಸ್ತುಗಳನ್ನು ಕಂಡಕಂಡಲ್ಲಿ ಎಸೆಯಬೇಡಿ.

## : ಪೊಲೀಸ್ ಅಧಿಕಾರಿಗಳ ದೂರವಾಣಿ ಸಂಖ್ಯೆಗಳು :

| | | |
|---|---|---|
| ಪೊಲೀಸ್ ಉಪಾಧೀಕ್ಷಕರು, ಶಿರಸಿ ಉಪವಿಭಾಗ, ಶಿರಸಿ ಮೊ. ನಂ | : | 9480805222 |
| ಪೊಲೀಸ್ ವೃತ್ತ ನಿರೀಕ್ಷಕರು, ಶಿರಸಿ ವೃತ, ಮೊ. ನಂ. | : | 9480805238 |
| ಪೊಲೀಸ್ ಉಪನಿರೀಕ್ಷಕರು, ಶಿರಸಿ ನಗರ ಪೊಲೀಸ್ ಠಾಣೆ, ಮೊ. ನಂ | : | 9480805264 |
| ದೂರವಾಣಿ ನಂ. | : | 08384–226333<br>9483629986 |